

ಇಪ್ಪತ್ತೊಂದನೇ ಶತಮಾನದ ಸಾಹಿತ್ಯದ ಓದಿನ ಬಿಕ್ಕಟ್ಟು ಎಂದರೆ ಸಾಹಿತ್ಯದ ಬಗೆಗೆ ಇದ್ದ ಪವಿತ್ರ ಭಾವನೆ ಕ್ಷೀಣವಾಗುತ್ತಾ ಬಂದಿದ್ದು ಎನ್ನಬಹುದು. ಸಾಹಿತ್ಯದ ಅನನ್ಯತೆ ಮತ್ತು ಬೆಳೆಯುತ್ತಿರುವ ಬಂಡವಾಳಶಾಹಿ ಸಮಾಜ ವ್ಯವಸ್ಥೆಗಳನ್ನು ಒಟ್ಟಾಗಿ ಗ್ರಹಿಸಬೇಕಾದ ಅನಿವಾರ್ಯತೆಯನ್ನು ಕಳೆದ ಶತಮಾನವೇ ಭಾವಿಸಿತು. ಈಗಿನ ಜಾಗತೀಕರಣೋತ್ತರ ದಶಕಗಳಲ್ಲಿ ಅದರ ಸಮಸ್ಯೆ ಇನ್ನಷ್ಟು ಉಲ್ಬಣವಾದಂತೆ ತೋರುತ್ತಿದೆ. ಆಧುನಿಕ ಸಮಾಜಗಳು ಉದಯಗೊಳ್ಳುತ್ತಿದ್ದ ಸಂದರ್ಭದಲ್ಲಿ ನಾಗರಿಕತೆಯನ್ನು ರೂಢಿಸಿಕೊಳ್ಳುವುದಕ್ಕಾಗಿ ಹಲವಾರು ಮಾಧ್ಯಮಗಳನ್ನು ಶೋಧಿಸಿಕೊಳ್ಳುತ್ತಿದ್ದವು. ಆ ಹೊತ್ತಿನಲ್ಲಿ ಸಾಹಿತ್ಯ ಹಾಗೂ ಇತರೆ ಕಲೆಗಳು ಈ ಅಗತ್ಯವನ್ನು ತಕ್ಕಮಟ್ಟಿಗೆ ಪೂರೈಸಿದವು. ಆಧುನಿಕತೆಯನ್ನು ಹೊಂದುತ್ತಿದ್ದ ಪುನರುಜ್ಜೀವನ ಯುಗದಲ್ಲಿ ವರ್ಗಗಳ ನಿರೂಪಣೆ ಹಾಗೂ ಒಂದು ಸಮುದಾಯದ ರುಚಿ ಮುಖ್ಯವಾದವು. ಇಂತಹ ಸಂದರ್ಭದಲ್ಲಿಯೇ ಸಾಹಿತ್ಯವನ್ನು ಓದುವ ಒಂದು ವರ್ಗ ಸೃಷ್ಟಿಯಾಗಿದ್ದು. ಇದೇ ಸಂದರ್ಭದಲ್ಲಿಯೇ ಕಲೆಯ ಮೂಲಕ ಅನೇಕ ಉತ್ಪಾದನಾ ಸಾಮರ್ಥ್ಯಗಳು ಸಹ ಬೆಳೆದು ಆರ್ಥಿಕವಾಗಿ ದೃಢಗೊಳ್ಳತೊಡಗಿತು. ಮುದ್ರಣಯಂತ್ರಗಳ ಆವಿಷ್ಕಾರ ಸಾಹಿತ್ಯವನ್ನು ಬಂಡವಾಳಶಾಹಿ ಕ್ರಮಕ್ಕೆ ಒಗ್ಗಿಸಿತು. ಸಾಹಿತ್ಯ ಒಂದು ಉತ್ಪಾದನೆಯಾಗಿ ಓದುಗ ಅದರ ಗ್ರಾಹಕನಾಗಿ ಮಾರ್ಪಡುವ ಕ್ರಿಯೆ ಒಂದು ವರ್ಗವನ್ನು ಸೃಷ್ಟಿಸುವೆಡೆ ತಿರುಗಿತು. ಸಾಹಿತ್ಯ ರಚನೆಯ ಹಾಗೂ ಓದುವ ಕ್ರಮಗಳು ಪ್ರಾಯಶಃ ಈ ವ್ಯವಸ್ಥೆಯನ್ನು ನೆಚ್ಚಿಕೊಂಡಿರುವುದರಿಂದ ಸಹಜವಾಗಿ ಎಲ್ಲ ಭಾಷೆಯ ಸಾಹಿತ್ಯಗಳೂ ಸಾಹಿತ್ಯದ ಪಲ್ಲಟಗಳನ್ನು ಕಾಣುತ್ತಿವೆ.

ಇದು ಕನ್ನಡದೊಂದೇ ಸಮಸ್ಯೆಯಲ್ಲ, ಲಿಪಿಯನ್ನು ತೊಡಗಿಸಿಕೊಂಡು ಬರೆಯುತ್ತಿರುವ ಎಲ್ಲ ಭಾಷಾ ಸಾಹಿತ್ಯಕ್ಕೂ ಎದುರಾಗಿರುವ ಸ್ಥಿತ್ಯಂತರದ ಸಮಸ್ಯೆ. ಮುಖ್ಯವಾಗಿ ಓದುಗಬ್ಬ, ಓದಾಣಿಕೆಗಳು ಇದ್ದ ಬಾಯಿ ಪರಂಪರೆಗಳಿಂದ ವಸಾಹತುಶಾಹಿ ಪ್ರಭಾವ, ಪ್ರೇರಣೆಗಳಿಂದ ಲಿಪಿ ಸಂಸ್ಕೃತಿಗೆ ಹೊರಳಿಕೊಂಡಿದ್ದು ಒಂದು ಹೊರಳು. ವಸಾಹತುಶಾಹಿಗೂ ಮೊದಲು ಬಂದ ಪಾಶ್ಚಾತ್ಯ ಮಿಶನರಿಗಳು ಲಿಪಿಯನ್ನು ಭಾರತದ ಪ್ರತಿ ಭಾಷೆಗೂ ರೂಢಿಸಿಕೊಡುವ ಯತ್ನ ಮಾಡಿದರು. ಮುದ್ರಣ ಅದರ ಮುಂದಿನ ಬೆಳವಣಿಗೆಯಾಗಿ ಬರಹವನ್ನು ಮುದ್ರಣಕ್ಕೆ ಒಗ್ಗಿಸುವ ಕೆಲಸ ನಡೆಯಿತು. ಇದಾಗಿ ಒಂದೂ ಒಂದೂವರೆ ಶತಮಾನ ಕಳೆದ ಮೇಲೆ ಪುನಃ ಲಿಪಿಯಿಂದ 'ಕೇಳುವ' ಅಭಿವ್ಯಕ್ತಿಗೆ ಒಗ್ಗಿಕೊಳ್ಳುತ್ತಿದ್ದೇವೆ. ಈ ಸ್ಥಿತ್ಯಂತರಗಳು ಚಾರಿತ್ರಿಕವಾದ ಹೊರಳುಗಳು. ಓದುವ ತಲೆಮಾರು ಇಂದು ಹೊರಳುದಾರಿಯಲ್ಲಿದ್ದು ಅದರ ಮುಂದೆ ಇರುವ ವಿಪುಲವಾದ ಅಭಿವ್ಯಕ್ತಿ ಮಾಧ್ಯಮಗಳು ಮುದ್ರಣದ ಸ್ಥಿತಿಯಿಂದ ಇನ್ನಷ್ಟು ವಿಸ್ತರಣೆಗೊಂಡಿರುವಂತವು. ಶ್ರಾವಣ ಮತ್ತು ಚಾಕ್ಷುಷ (ಆಡಿಯೊ–ವಿಷುಯಲ್) ರೂಪಗಳು ಓದಿಗೆ ಪರ್ಯಾಯವಾಗಿ ರೂಪುಗೊಳ್ಳುತ್ತಿರುವುದರಿಂದ ಸಾಹಿತ್ಯವೊಂದೇ ಈ ಹೊತ್ತು ಓದುಬಲ್ಲವರಿಗೆ ಆದ್ಯತೆಯಾಗಿರುವುದಿಲ್ಲ. ಆಧುನಿಕತೆಯ ಕಾಲದಲ್ಲಿ ಬರೆಯದೇ 'ಕೇಳಿಸುವ',